**ಸಾಕ್ಷಿಗೆ ದಿನಾಂಕಃ 04.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ವಿ.ಕೆ.ಎಂ. ವಕೀಲರಿಂದಃ**

ದಾವಾ ಸ್ವತ್ತಿನ ಮೂಲ ಸರ್ವೆ ನಂ.20/1. ಅದರ ವಿಸ್ತೀರ್ಣ ಒಂದು ಮುಕ್ಕಾಲು ಎಕರೆ. ಆರ್.ಟಿ.ಸಿ.ಯು ಮಹದೇವನಾಯಕ, ನಂಜುಂಡನಾಯಕ, ಲಕ್ಷ್ಮಮ್ಮ ರವರ ಹೆಸರಿನಲ್ಲಿ ಇರುತ್ತದೆ. ಸದರಿಯವರ ಹೆಸರಿನಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ಹೇಳಲು ಬರುವುದಿಲ್ಲ. ನನ್ನ ಜಮೀನನ್ನು ಅಳತೆ ಮಾಡಿಸಿ ಪೋಡು ಮತ್ತು ದುರಸ್ಥಿ ಮಾಡಿಸಿರುತ್ತೇನೆ. ನನ್ನ ಸ್ವತ್ತಿನ ಅಕ್ಕಪಕ್ಕ ಯಾರ ಯಾರ ಜಮೀನು ಇರುತ್ತದೆ ಎಂದು ಸರ್ಟಿಫಿಕೇಟನ್ನು ನೀಡಿರುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಂಜುಂಡನಾಯಕ ರವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಲಕ್ಷ್ಮಮ್ಮ ರವರ ಜಮೀನು ಇರುತ್ತದೆ. ಸದರಿ ಚೌತರ್ಪನ್ನು ಸರ್ಕಾರದವರು ನೀಡಿರುವುದಿಲ್ಲ. ಸದರಿ ಚೌತರ್ಪನ್ನು ನಾನೇ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿ.

ದಾವಾ ಸ್ವತ್ತಿನ ಪಕ್ಕದಲ್ಲಿ ಪ್ರತಿವಾದಿಗಳ ಜಮೀನು ಇರುತ್ತದೆ. ಅವರಿಗೆ ಜಮೀನು ಎಷ್ಟು ಇರುತ್ತದೆ ನಾನು ತಿಳಿದುಕೊಂಡಿರುವುದಿಲ್ಲ. ಅವರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳ ಸ್ವತ್ತು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ನೀಲಗಿರಿಯನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರಿನಲ್ಲಿ ಸರ್ವೆ ನಂ.25/1 ಇತ್ತು. ಸರ್ವೆ ನಂ.25/2 ನಮ್ಮ ತಾತನ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಚಿಕ್ಕಮಾದಮ್ಮ, ಸಿದ್ದ ಮತ್ತು ಮಂಡ್ಯದ ಮಂಟಕದ ಸಿದ್ದನಾಯಕನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.25/1ರಲ್ಲಿ ನಂಜಮ್ಮನವರಿಗೆ 10 ಗುಂಟೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.25/1 ಚಿಕ್ಕಮಾದಮ್ಮ ನವರಿಗೆ 5 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.25/1ರಲ್ಲಿ ಪ್ರತಿವಾದಿಗಳಿಗೆ 30 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದಿರುವುದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ನಮ್ಮ ತಾತನಿಗೆ ಹೇಗೆ ಬಂತು ಎಂದು ತೋರಿಸಲು ದಾಖಲು ಇರುವುದಿಲ್ಲ. ದಾವಾ ಸ್ವತ್ತು ನಮಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಸಹೋದರರ ನಡುವೆ ವಿಭಾಗ ಆಗಿದ್ದು, ಅದರ ಪತ್ರ ಇರುತ್ತದೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ
ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**